# ಎಂಎಸ್‌ಎಂಇ ಉದ್ಯಮಗಳಿಗೆ ಡಿಜಿಟಲ್ ಸೇವೆ ಒದಗಿಸಲು ಬ್ರಿಕ್‌ವರ್ಕ್ಸ್ ಪ್ಲಾಟ್‌ಫಾರಂ

ಬೆಂಗಳೂರು: ಎಂಎಸ್ ಎಂಇ ಉದ್ಯಮಗಳಿಗೆ 360 ಡಿಗ್ರಿ ಸೇವೆಗಳನ್ನು ಒದಗಿಸುವ ಎಂಎಸ್‌ಎಂಇ1 ಸೇವೆಯನ್ನು ಬ್ರಿಕ್‌ವರ್ಕ್ಸ್‌ಅನಾಲಿಟಿಕ್ಸ್ ಆರಂಭಿಸಿದೆ. ಅತ್ಯುತ್ತಮವಾದ ಬಿಡಬ್ಲ್ಯುಎ ಎಸ್‌ಎಂಇ1 ರಿಂದ ಅತಿ ಕಳಪೆ ಸಾಧನೆಯ ಬಿಡಬ್ಲ್ಯುಎ ಎಸ್‌ಎಂಇ8 ವರೆಗೆ ಗ್ರೇಡಿಂಗನ್ನು ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್ ನೀಡುತ್ತದೆ.

ಎಂಎಸ್‌ಎಂಇ1 ರಲ್ಲಿ ಎಂಎಸ್‌ಎಂಇ ಪರ್ಫಾರ್ಮೆನ್ಸ್ ಗ್ರೇಡಿಂಗ್, ಡ್ಯೂಡಿಲಿಜೆನ್ಸ್, ಬಿಡಬ್ಲ್ಯುಎ ಪ್ರಮಾಣಿತ ಸರ್ಟಿಫಿಕೇಷನ್ ಮತ್ತು ಕಂಪೆನಿ ಪ್ರೊಫೈಲಿಂಗ್ ಬ್ರಿಕ್‌ವರ್ಕ್ ಅನಾಲಿಟಿಕ್ಸ್‌ಗ್ರೇಡಿಂಗನ್ನು ಸ್ವತಂತ್ರವಾಗಿ ಪ್ರಮಾಣಿಸಿ, ಮೌಲ್ಯಮಾಪನಗೊಳಿಸಿ, ಉದ್ಯಮಗಳ ಕಾರ್ಯಕ್ಷಮತೆ, ಆರ್ಥಿಕ ಮತ್ತು ನಿರ್ವಹಣೆ ಸಾಮರ್ಥ್ಯವನ್ನು ವಿಶ್ಲೇಷಿಸಲಾಗುತ್ತದೆ.

ಕಂಪೆನಿಯ ಒಟ್ಟಾರೆ ಕ್ರೆಡಿಟ್ ಸಾಮರ್ಥ್ಯವನ್ನು ಇದರ ಮೂಲಕ ಅಳೆಯಲಾಗುವುದು ಎಂದು ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್‌ನರಿಸ್ಕ್ ಮತ್ತು ಅನಾಲಿಟಿಕ್ಸ್ ಮುಖ್ಯಸ್ಥರಾದ ರೀಟಾಬನ್ ಬಸು ತಿಳಿಸಿದ್ದಾರೆ.

ಹಣಕಾಸು ವಿಶ್ಲೇಷಣೆ, ಉತ್ಪಾದಿಸುವ ಮತ್ತು ವಹಿವಾಟಿನ ಉತ್ಪನ್ನದ ಸ್ವರೂಪ ಮತ್ತು ಮಾರುಕಟ್ಟೆಯಲ್ಲಿ ಅದಕ್ಕಿರುವ ಬೇಡಿಕೆ, ಪ್ರಕ್ರಿಯೆಯಲ್ಲಿರುವಅಪಾಯ, ಮಾರುಕಟ್ಟೆಯಲ್ಲಿ ಸ್ಪರ್ಧೆಯ ಬಲ, ನಿರ್ವಹಣೆಗುಣಮಟ್ಟ ಮತ್ತುಉದ್ಯಮಕ್ಷೇತ್ರದ ಪರಿಸ್ಥಿತಿ ಈ ಐದು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಗ್ರೇಡಿಂಗ್ ನೀಡಲಾಗುತ್ತದೆ ಎಂದುಅವರು ಹೇಳಿದರು.